ದೇವರ ರಾಜ್ಯದ

# ಶುಭವಾರ್ತೆ

"ಎಲ್ಲವನ್ನೂ ಪರಿಶೋಧಿಸಿ ಒಳ್ಳೆಯದನ್ನು ಭದ್ರವಾಗಿ ಹಿಡಿದುಕೊಳ್ಳಿರಿ"
(1 ಥೆಸಲೋನಿಕ 5:21)

ಕ್ರಿಸ್ತಡೆಲ್ಫಿಯನ್ನರ ಸತ್ಯವೇದದ ಸತ್ಯಪ್ರಚಾರ ಪತ್ರಿಕೆ

52

# "ನನ್ನನ್ನು ಕ್ರಯಕ್ಕೆ ಕೊಂಡ ಕರ್ತನು"

-ಭಾ. ಚಂದುದಾಸ್

> ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟ ದೇವಕುಮಾರ—ಗಲಾತ್ಯ 2:20

ಕ್ರಿಸ್ತ ಯೇಸುವಿನಿಂದಾದ ಮಾನವನ ವಿಮೋಚನೆಯನ್ನು ಕಣ್ಣೀರಿನಿಂದ ನೆನಸುತ್ತಾರೆ ; ಕೋಪದಿಂದ ವಾದಿಸುತ್ತಾರೆ ; ಗಣಿತದ ಸಮೀಕರಣಕ್ಕೆ ಇಳಿಸುತ್ತಾರೆ ; ಅರ್ಥಮಾಡಿಕೊಳ್ಳಲಾಗದೆಂದು ತೊರೆದು ಬಿಡುತ್ತಾರೆ ; ಕೆಲವೊಮ್ಮೆ ತಿರಸ್ಕಾರದ ವಿಷಯವಾಗಿ ಮಾಡುತ್ತಾರೆ. ಇಲ್ಲಿಯ ತನಕ ರೌದ್ರದಿಂದ ಕೂಡಿದವನಾಗಿ, ಕ್ಷಮೆಯಿಲ್ಲದವನಾಗಿದ್ದ ದೈವವನ್ನು ಕರ್ತನಾದ ಯೇಸುವು ಸಮಾಧಾನಪಡಿಸಿ ನಮ್ಮ ಕಡೆಗೆ ಆತನ ಮುಖವನ್ನು ತಿರುಗಿಸುವಲ್ಲಿ ಸಫಲನಾದನೆಂದು ಕೆಲವರು ಆಲೋಚಿಸುತ್ತಾರೆ. ಮತ್ತೆ ಕೆಲವರು ವಿಮೋಚನೆಯನ್ನು ತೂಕಗಳ, ಗಡಗಡೆ (ರಾಟೆ)ಗಳಿಂದ, ಹಾಗೂ ಹಗ್ಗಗಳ ಒಂದು ಯಾಂತ್ರಿಕ ವಿಧಾನದಂತೆ ಪಡೆಯಲಾಗಿದೆ ಎಂದು ಭಾವಿಸುತ್ತಾರೆ. ಇತರರು ಅಂದೊಂದು ಆತ್ಮೀಕ ವ್ಯವಹಾರವಾಗಿದ್ದು, ಬೆಲೆಕಟ್ಟಲಾಗದ ಕ್ರಿಸ್ತನ ರಕ್ತವನ್ನು ಪಿಶಾಚನೆಂದು ಕರೆಯಲ್ಪಡುವ ಒಬ್ಬನಿಗೆ ಕೊಟ್ಟು, ಅವನ ದುಷ್ಟ ಹಿಡಿತದಿಂದ ಪಾಪಿಗಳನ್ನು ಬಿಡುಗಡೆ ಮಾಡಲಾಯಿತು ಎಂದು ತಿಳಿದಿರುತ್ತಾರೆ. ಕ್ರಿಸ್ತನ ಮರಣವನ್ನು ಮಾನವರಿಗೆ ಬದಲಾಗಿ ಕೊಡಲ್ಪಟ್ಟದ್ದೆಂದು ನೋಡುವಲ್ಲಿ ಸಹಾಯಕವಾಗಿದೆಯೆಂದು ಕೆಲವರು ತಿಳಿದಿದ್ದಾರೆ, ಅಂದರೆ – ನಮಗೆ ಬದಲಾಗಿ ಕ್ರಿಸ್ತನು ಶಿಲುಬೆಗೆ ಹೋದನು, ಈ ರೀತಿಯಾಗಿ ನಮ್ಮ ವೈಯಕ್ತಿಕ ಪಾಪಗಳಿಗಾಗಿ ಆತನು ಬೆಲೆಯನ್ನು ತೆತ್ತನು. ಮತ್ತೆ ಕೆಲವರು ಆತನ ಮರಣವು ಒಂದು ದುಃಖಾಂತವಾಗಿದ್ದು, ದುಷ್ಟ ಪರಿಸ್ಥಿತಿಯ ಒಂದು ಅಪಘಾತವಾಗಿದ್ದು. ಅದು ಯಾವ ರೀತಿಯಲ್ಲಿಯೂ ವಿಮೋಚನಾ ರೂಪವಾಗಿರಲಿಲ್ಲ ಎಂದು ಭಾವಿಸುತ್ತಾರೆ.

ಸತ್ಯವೆಂದರೇನು ? ಈ ಊಹಾಪೋಹದ ಅವ್ಯವಸ್ಥೆಯಿಂದ ಹೊರಬರುವುದು ಹೇಗೆ ? ಬೇರೆ ಪ್ರತಿಯೊಂದರಲ್ಲಿರುವಂತೆ, ಒಂದೇ ಒಂದು ನಿಶ್ಚಿತ ಮಾರ್ಗವಿದೆ – ಅದೇನೆಂದರೆ ಸತ್ಯವೇದವು ಬೋಧಿಸಲು ಹಾಗೂ ಮಾರ್ಗದರ್ಶನ ಮಾಡಲು ಅವಕಾಶ ಕೊಡಿ ಹಾಗೂ ಆ ಶಿಕ್ಷಣದ ಶಿಸ್ತಿಗೆ ದೀನ ಮನಸ್ಸಿನಿಂದ ಶರಣಾಗಿ. ತನ್ನ ರೌದ್ರದಿಂದಾಗಿ ನಮ್ಮಿಂದ ವಿಮುಖನಾದ ಒಬ್ಬ ದೇವರ ಮುಂದೆ ಮೊಣಕಾಲೂರಿ ಯೇಸುವು ಬೇಡುತ್ತಿದ್ದನೆಂಬ ಕಲ್ಪನೆಯನ್ನು

ಪೂಜಾಮಾಡುವುದರಿಂದ ಪ್ರಾರಂಭಿಸೋಣ. ಶಿಲುಬೆಯ ಗುಟ್ಟು ಪ್ರೀತಿಯಾಗಿದೆ. ದೇವರ ಪ್ರೀತಿ ಮತ್ತು ಆತನ ಮಗನ ಪ್ರೀತಿ ಇನ್ನಾವುದನ್ನು ನಾವು ಪರಿಗಣಿಸಿದರೂ ಸಹ, ಈ ಅಸ್ತಿವಾರನನ್ನು ನಾವು ಹಾಕೋಣ : ವಿಮೋಚನೆಗೆ ಪ್ರೇರಕ ಶಕ್ತಿಯು ಪ್ರೀತಿಯಾಗಿದೆ :

> "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು". (ಯೋಹಾನ 3:16).
>
> "ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ". (ರೋಮಾ 5:8).
>
> "........ಕ್ರಿಸ್ತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿ ಕೊಟ್ಟನು". (ಗಲಾತ್ಯ 2:20).

ವಿಮೋಚನೆಗೆ ಪ್ರೀತಿಯೇ ಕಾರಣವಾಗಿರುತ್ತದೆ. ಪ್ರೀತಿಯು ದೇವರಿಂದ ಹರಿದು ಬಂತು, ಆದ್ದರಿಂದ ಆತನು ಈ ಲೋಕಕ್ಕೆ ಕಳುಹಿಸಿಕೊಟ್ಟ ಮಗನಿಂದ ಬಂತು. ಪ್ರೀತಿಯನ್ನು ಕಟ್ಟಣೆಗೆ ಇಳಿಸುವುದಾಗಲೀ ಇಲ್ಲವೇ ಹಕ್ಕು ಮತ್ತು ಗಳಿಕೆಯೆಂದು ಪರಿಗಣಿಸುವುದಾಗಲೀ ಮಾಡಲಾಗದು. ಪ್ರೀತಿಯು ಈ ಎಲ್ಲಾ ಪರಿಗಣನೆಗಳಿಗೆ ಮಿಗಿಲಾದದ್ದು ಹಾಗೂ ಅತೀತವಾದದ್ದು. ನಮ್ಮಲ್ಲಿನ ಒಳ್ಳೆಯತನಕ್ಕೆ ಇಲ್ಲವೇ ಯೋಗ್ಯತೆಗೆ ಪ್ರೀತಿಯು ಹಂಗಿನಲ್ಲಿರುವುದಿಲ್ಲ. "ಕನಿಕರವೂ ದಯೆಯೂ" ಉಳ್ಳ ದೇವರಿಂದ ಪ್ರೀತಿಯು ಹೊಮ್ಮುತ್ತದೆ.

## ಪಾಪಗಳ ಕ್ಷಮೆ

ಶಿಲುಬೆಯ ಎರಡನೇ ಗುಟ್ಟು ಏನೆಂದರೆ ಪಾಪಗಳ ಕ್ಷಮೆಯು ಮೂಲವು ಅದೇ ಆಗಿರುತ್ತದೆ. ಅದು ಪಾವತಿ ಮಾಡಿ ತೀರಿಸಿದ ಒಂದು ಸಾಲವಲ್ಲ. ಅದು ಯಾರೊಬ್ಬನು ಬೆಲೆಯನ್ನು ಕೊಟ್ಟು ಅದರಿಂದ ಇತರರು ಬಿಡುಗಡೆ ಹೊಂದುವ ಒಂದು ಬದಲಿ (ಪ್ರತಿನಿಧ್ಯಾತ್ಮಕ **Substitutionary**) ಬಲಿಯಲ್ಲ. ಇಲ್ಲ, ಶಿಲುಬೆಯು ಕ್ಷಮಾಪಣೆಯ ಸಾಧನ, ಮತ್ತು ಕ್ಷಮಾಪಣೆಯು ಕೃಪೆಯ ಒಂದು ಕಾರ್ಯವೇ ಹೊರತು ಸಾಲ ತೀರಿಸುವದರಿಂದಾಗುವ ಹಕ್ಕುಗಳ ಇಲ್ಲವೇ ಗಳಿಕೆಯ ಕಾರ್ಯವಾಗಿರುವುದಿಲ್ಲ. ಆದ್ದರಿಂದ ನಮ್ಮ ಕರ್ತನಾದ ಯೇಸುವಿನ ವಿಮೋಚನಾ ಕಾರ್ಯದ ನಮ್ಮ ಗ್ರಹಿಕೆಯು ದೇವರ ಪ್ರೀತಿಯ ಹಾಗೂ ಆತನ ಕ್ಷಮಾಪಣೆಯ ಸಂಪೂರ್ಣ ನಿರೂಪಣೆಗೆ ಅವಕಾಶವೀಯಬೇಕು.

ಪ್ರೀತಿಯು ಮತ್ತು ಕ್ಷಮಾಪಣೆಯು ಆಶೀರ್ವಾದಗಳು ಕ್ರಿಸ್ತನ ಸುವಾರ್ತೆಯ ಸಂದೇಶದಲ್ಲಿ ಹಾಗೂ ಯೇಸುವಿನ ಮುಖಾಂತರ ನಮ್ಮನ್ನು ದೇವರು ಅಂಗೀಕರಿಸುವುದು. ವಿಶ್ವಾಸದ ಕಾಲುವೆಯು ಮೂಲಕ ನಮಗೆ ಹರಿದು ಬರುತ್ತದೆ. ದೇವರು ನೇಮಕ ಮಾಡಿದ ರೀತಿಯಲ್ಲಿ ಒಬ್ಬ ವಿಶ್ವಾಸಿಯು ವೈಯಕ್ತಿಕವಾಗಿ ಕ್ಷಮಾಪಣೆಯನ್ನು ಬೇಡಿದಲ್ಲಿ, ಅದು ಅವನಿಗೆ ದೊರೆಯುತ್ತದೆ. ಕ್ಷಮಾಪಣೆಯು ನಿಶ್ಚಯವಾದದು ; ಆದರೆ ತಾನಾಗಿಯೇ ದೊರೆಯುವಂತದಲ್ಲ. ದೇವರಲ್ಲಿ ಕ್ಷಮಾಪಣೆಯುಂಟು, ಆದರೆ ಮಾನವರಿಗೆ ತಿಳಿಯದ ಹಾಗೆ ಮತ್ತು ಅವರ ಸಹಕಾರವಿಲ್ಲದೆ ಅದನ್ನು ಅವರಿಗೆ ನೀಡಲಾಗುವುದಿಲ್ಲ. ವಿಮೋಚನೆಯು ಸಾಲವನ್ನು ತೀರಿಸುವ ಇಲ್ಲವೇ ಬದಲಿ ವ್ಯವಹಾರದ್ದಾಗಿದ್ದಲ್ಲಿ, ಅಂತಹುದು ನಿಜವಾಗುತ್ತಿತ್ತು—ಆದರೆ ಅದು ಸಂಪೂರ್ಣವಾಗಿ ನಾವು ಕ್ಷಮಾಪಣೆ ಬೇಡುವುದನ್ನು ತೆಗೆದು ಹಾಕುತ್ತಿತ್ತು.

ಈ ಬಗ್ಗೆ ಸತ್ಯವೇದವು ಬಹಳ ಸರಳವಾದದ್ದಾಗಿಯೂ ಹೆಚ್ಚು ತೃಪ್ತಿಕರವಾಗಿಯೂ ಇರುತ್ತದೆ. ಸುವಾರ್ತೆಯನ್ನು ನಂಬಿ, ಪಶ್ಚಾತ್ತಾಪ ಪಟ್ಟು, ಕ್ರಿಸ್ತನ ಹೆಸರಿನಲ್ಲಿ ಯಾರು ದೀಕ್ಷಾಸ್ನಾನ ಹೊಂದುತ್ತಾರೋ ಅವರಿಗೆ ಕ್ಷಮಾಪಣೆಯು ದೊರೆಯುತ್ತದೆ. ಸತ್ಯವೇದದ ಈ ಕೆಳಗಿನ ವಚನಗಳು ಸಂಪೂರ್ಣವಾಗಿ ಸ್ಪಷ್ಟವಾಗಿದೆ :

> "ಪೇತ್ರನು ಅವರಿಗೆ—ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು, ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (ಅ. ಕೃ. 2:38).
>
> "ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪ ಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ" (ಅ.ಕೃ. 3:19).
>
> "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅ. ಕೃ. 22:16).
>
> "ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?......ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ......ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದದರಿಂದ ಪರಿಶುದ್ಧರಾಗುವದೇ ನಿಮಗೆ

ಫಲ; ಕಡೆಗೆ ದೊರೆಯುವಂಥದು ನಿತ್ಯ ಜೀವ. ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ" (ರೋಮಾ 6:3,4,22,23).

"(ನಾನು) ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವುದು ಹೇಗೆಂದರೆ ದೇವ ಕುಮಾರನ ಮೇಲಿನ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿ ಬಿಟ್ಟನು" (ಗಲಾತ್ಯ 2:20).

ಈ ವಚನಗಳು ಸ್ಪಷ್ಟ ಹಾಗೂ ಹೊಂದಿಕೆಯಾಗಿರುತ್ತವೆ. ನಾವು ನಂಬಿಕೆಯಿಂದ ಬಂದು, ಪಶ್ಚಾತ್ತಾಪ ಪಟ್ಟು ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿ ಆತನ ಮರಣದಲ್ಲಿ ಸೇರಿದಾಗ, ಯೇಸುವಿನ ರಕ್ಷಣಾ ಕಾರ್ಯದಿಂದ ಅದ್ಭುತವಾದ ಪ್ರಯೋಜನವು ನಮಗೆ ಹರಿದು ಬಂದು, ಅದು ನಮಗೆ ಪರಿಣಾಮಕಾರಿಯಾಗಿರುತ್ತದೆ. ಪಾಪಿಗೂ ರಕ್ಷಕನಿಗೂ ಇರುವ ಸಂಬಂಧವನ್ನು ಸ್ಥಾಪಿಸಲು ದೀಕ್ಷಾಸ್ನಾನವು ಅಗತ್ಯವಾದ ಅಂಗ ಭಾಗವಾಗಿದೆ.

ನಮ್ಮಲ್ಲಿ ಪ್ರತಿಯೊಬ್ಬರಿಗೂ ಬಹು ಪ್ರಾಮುಖ್ಯವಾದ ಪ್ರಶ್ನೆಯನ್ನು ನಾವು ಈಗ ಪರಿಗಣಿಸೋಣ. ನಾವು ಕ್ಷಮಾಪಣೆ ಹೊಂದಿ, ರಕ್ಷಿಸಲ್ಪಡಲು ಯೇಸುವಿನ ಮರಣವು ಹೇಗೆ ಸಾಧ್ಯವಾಯಿತು? ನಾವೋ ನಿಸ್ಸಂದೇಹವಾಗಿ ಬಲಹೀನರು ಮತ್ತು ಪಾಪಕ್ಕೆ ಆಜೀವ ದಾಸತ್ವದಲ್ಲಿರುವವರು; ಆತನಾದರೋ ಒಟ್ಟಾರೆ ಪರಿಶುದ್ಧನೂ ನೀತಿವಂತನೂ, ಸತ್ಯನೂ ಹಾಗೂ ಪಾಪರಹಿತನೂ ಆಗಿದ್ದಾನೆ. ನಮಗೂ ಕ್ರಿಸ್ತನಿಗೂ ಯಾವ ರೀತಿಯ ಸೇತುವೆ ಇಲ್ಲವೇ ಸಂಬಂಧವಿರಬಹುದಾಗಿದೆ?

ಇಲ್ಲಿದೆ ಒಂದು ಅದ್ಭುತವಾದ ಸಂಗತಿ. ಕ್ರಿಸ್ತನು ದೇವರಿಗೂ ಮಾನವನಿಗೂ ಸೇತುವೆ ಕಟ್ಟುವವನೆಂದು ಸುವಾರ್ತೆಯು ಸ್ಪಷ್ಟವಾಗಿ ತಿಳಿಸುತ್ತದೆ. ಆತನು ಕಳೆದು ಹೋದ ಕುರಿಯನ್ನು ಹುಡುಕುವವನಾಗಿದ್ದಾನೆ; ಅಸ್ವಸ್ಥರಿಗೆ ವೈದ್ಯನಾಗಿದ್ದಾನೆ. ಕ್ರಿಸ್ತನು ಕತ್ತಲೆಯಲ್ಲಿರುವವರಿಗೆ ಬೆಳಕಾಗಿದ್ದಾನೆ, ಸತ್ತವರಿಗೆ ಜೀವವಾಗಿದ್ದಾನೆ:

"ಕುರಿಗಳಿಗೆ ನಾನೇ ಬಾಗಿಲಾಗಿದ್ದೇನೆ......ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿರುವನು (ರಕ್ಷಿಸಲ್ಪಡುತ್ತಾನೆ)......ನಾನೇ ಒಳ್ಳೇ ಕುರುಬನು; ಒಳ್ಳೇ ಕುರುಬನು ತನ್ನ

ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ" (ಯೋಹಾನ 10:7,9,11).

ಇಲ್ಲಿ ಭಾಷೆಯು ಇದಕ್ಕಿಂತಲೂ ಹೆಚ್ಚಾಗಿ ಸಮಾಧಾನಕರವಾಗಿಯೂ ಭರವಸೆಯಿಂದ ಕೂಡಿದ್ದಾಗಿಯೂ ಇರಲು ಸಾಧ್ಯವಿಲ್ಲ. ಸತ್ಯವೇದದ ಮತ್ತೊಂದು ಭಾಗದಲ್ಲಿ ಹೇಳುವಂತೆ "ಯಾವ ಮನುಷ್ಯ" ಇಲ್ಲವೇ "ಯಾರಾದರಾಗಿರಲಿ" ಯೇಸುವು ನಿತ್ಯಜೀವಕ್ಕೆ ಬಾಗಿಲಾಗಿದ್ದಾನೆ. ನಾವು ಬಾಗಲಿನ ಮೂಲಕ ಹೋದಾಗ, ಕುರಿಹಟ್ಟಿಯೊಳಕ್ಕೆ ಪ್ರವೇಶಿಸುತ್ತೇವೆ. ಇತರ ಯಾವ ಕುರುಬನೂ ನಮಗೆ ನಿತ್ಯಜೀವವನ್ನು ವಾಗ್ದಾನ ಮಾಡಲು ಸಾಧ್ಯವಿಲ್ಲ: ಇತರ ಯಾವ ಕುರುಬನೂ ತನ್ನ ರಕ್ತದಿಂದ ಮುದ್ರೆ ಹಾಕುವುದರ ಮೂಲಕ ಆ ವಾಗ್ದಾನವನ್ನು ನೆರವೇರಿಸಿರುವುದಿಲ್ಲ.

ಈ ಸಮಾಧಾನಕರವಾದ ಮತ್ತು ವಾಗ್ದಾನದ ಮಾತುಗಳಿಂದ, ನಾವು ಮತ್ತೆ ಈ ಪ್ರಶ್ನೆಯನ್ನು ಕೇಳಲೇ ಬೇಕಾಗಿದೆ, "ಆದರೆ ಇದು ಹೇಗೆ ತಾನೇ ಸಾಧ್ಯ?" ಇತರರು ತಮ್ಮ ನೆರೆಯವರಿಗೆ ತಮ್ಮ ಜೀವವನ್ನು ತೆತ್ತಿದ್ದಾರೆ ಇಲ್ಲವೇ ಇತರರ ಜೀವವನ್ನು ತಮ್ಮ ಜೀವಕ್ಕಿಂತ ಅಮೂಲ್ಯವೆಂದು ಪರಿಗಣಿಸಿದ್ದಾರೆ. ಹಾಗಿದ್ದಲ್ಲಿ ಯೇಸುವು ಹೇಗೆ ಅವರಿಗಿಂತ ಭಿನ್ನವಾಗಿರುತ್ತಾನೆ?

## ದೇವರ ಕುರಿಮರಿ

"ಕುರಿ" ಮತ್ತು "ಕುರುಬ" ಎಂಬ ಪದಗಳಲ್ಲಿ ಬಹಳ ಸ್ವಾರಸ್ಯಕರವಾದ ಮುಂದಾಳತ್ವವಿದೆ. ಯೇಸುವನ್ನು ಯಾಕೆ ಒಳ್ಳೆಯ ಕುರುಬನೆಂದು ಕರೆಯಬೇಕು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಹಾಗಿದ್ದಲ್ಲಿ ದೇವರ ಕುರಿಮರಿ ಎಂದಾಗಿಯೂ ಏಕೆ ಆತನು ಕರೆಯಲ್ಪಡಬೇಕು? ನಮ್ಮ ವಿಮೋಚನೆಯ ಅಂತರಂಗವು ಇಲ್ಲಿ ಅಡಗಿದೆ. ಯಾವಾತನು ಕುರುಬನಾಗಿದ್ದಾನೋ ಅವನೇ ಕುರಿ ಮರಿಯೂ ಆಗಿದ್ದನು: ಆತನು ಕುರಿಯ ಜೀವಿತವನ್ನು ಪಾಲ್ಗೊಂಡು ಒಬ್ಬ ಕುರುಬನ ಅವಶ್ಯಕತೆಯನ್ನು ತಿಳಿದಿದ್ದನು. ಈ ಸಾಂಕೇತಿಕ ಭಾಷೆಯಿಂದ ಹೊರ ಬಂದು ಆ ಭಾವನೆಗಳನ್ನು ನೇರವಾದ ಮಾತುಗಳಲ್ಲಿ ಹೇಳಬಹುದಾಗಿದೆ:

> "ಇದಲ್ಲದೆ ಮಕ್ಕಳು (ಯೇಸುವು ಯಾರನ್ನು ರಕ್ಷಿಸಲು ಬಂದನೋ ಅವರು) ರಕ್ತ ಮಾಂಸಧಾರಿಗಳಾಗಿರುವದರಿಂದ ಆತನೋ (ಯೇಸುವು) ಅವರಂತೆಯೇ ಆದನು" (ಇಬ್ರಿಯ 2:14).

ನಿಜವಾಗಿಯೂ ದೇವರ ಮಗನಾದ ಯೇಸುವು ರಕ್ತ ಮಾಂಸಧಾರಿಯಾಗಿದ್ದನು. ಬಹಳ ಹಿಂದೆಯೇ ಕೆಲವರು ಇದನ್ನು ವಿರೋಧಿಸಿ, ಯೇಸುವು

ರಕ್ತ ಮಾಂಸಧಾರಿಯಾಗಿದ್ದನೆಂಬುದಕ್ಕೆ ತೊಡಕನ್ನುಂಟುಮಾಡುವ ಕಲ್ಪನೆಗಳನ್ನು ಕಂಡುಹಿಡಿದರು. ಈ ಜನರು ಯೇಸುವು ರಕ್ತ ಮಾಂಸಧಾರಿಯಾಗಿದ್ದನೆಂಬುವುದು, ವಾಸ್ತವವಲ್ಲ, ಹಾಗೆ ತೋರಿ ಬಂದನು ಎಂದು ಹೇಳಿದರು. ಈ ಸಿದ್ಧಾಂತಕ್ಕೆ ಸತ್ಯವೇದದಲ್ಲಿ ಯಾವ ಆಧಾರವೂ ಇಲ್ಲವಾದ್ದರಿಂದ ಇದನ್ನು ಒಪ್ಪಿಕೊಳ್ಳಲಾಗದು. ಅಲ್ಲದೆ ನಿಶ್ಚಯವಾಗಿಯೂ ವಿಮೋಚನೆಯ ಸಂಪೂರ್ಣ ಕಾರ್ಯವನ್ನು ಶಿಥಿಲಗೊಳಿಸುವಂಥದ್ದಾಗಿದೆ.

ಸತ್ಯವೇದವು ಹೇಳುವ ಹಾಗೆ ಯೇಸುವು ರಕ್ತ ಮಾಂಸಾಧಾರಿಯಾಗಿದ್ದಲ್ಲಿ, ನಮ್ಮಂತೆಯೇ ಆತನು ನಿಜವಾಗಿಯೂ ಶೋಧಿಸಲ್ಪಟ್ಟನೇ ? ನಾವು ಸಾಯುವ ಹಾಗೆಯೇ ಆತನು ಸತ್ತನೇ ? ನಿಶ್ಚಯವಾಗಿ. ಇವೇ ಕ್ರಿಸ್ತನಿಗೂ ಆತನು ರಕ್ಷಿಸಲ್ಪಡಲು ಬಂದವರಿಗೂ ಮಧ್ಯೆ ಇರುವ ನಿಜವಾದ ಕೂಡಿಸುವ ಅಂಶಗಳು. ಇವೆಲ್ಲವನ್ನೂ ಪಾಲ್ಗೊಳ್ಳುವದರಿಂದ ಆತನು ನಿಶ್ಚಯವಾಗಿಯೂ ನಮ್ಮಂತೆಯೇ ಇದ್ದನು. ಈ ಪಾಲ್ಗೊಳ್ಳುವಿಕೆ ಇಲ್ಲದಿದ್ದಲ್ಲಿ, ಆತನು ನಮಗಿಂತ "ಭಿನ್ನ" ವಾದವನಾಗಿದ್ದನೆಂದು ಭಾವಿಸಬೇಕಾಗುತ್ತದೆ. ಯೇಸುವು ಈ ವಿಷಯಗಳಲ್ಲಿ ಕರಾರುವಾಕ್ಕಾಗಿ "ನಮ್ಮಂತೆಯೇ" ಆಗಿದ್ದನೆಂದು ಸತ್ಯವೇದವು ತಿಳಿಸುತ್ತದೆ.

ಉದಾಹರಣೆಗೆ ಶೋಧನೆಯ ವಿಷಯವನ್ನು ತೆಗೆದುಕೊಳ್ಳಿ. ಯೇಸು ಕ್ರಿಸ್ತನ ಬಗ್ಗೆ ಈ ವಿಷಯದಲ್ಲಿ ಸತ್ಯವೇದವು ಬಹಳಷ್ಟು ಬೋಧನೆಯನ್ನು ಒದಗಿಸುತ್ತದೆ.

> "ಆದುದರಿಂದ ಆತನು (ಯೇಸುವು) **ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ** ಸಮಾನನಾಗಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣೆ ಮಾಡುವುದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾ ಯಾಜಕನಾದನು. **ತಾನೇ ಶೋಧಿಸಲ್ಪಟ್ಟು** ಬಾಧೆಯನ್ನು **ಅನುಭವಿಸಿರುವುದರಿಂದ** ಶೋಧಿಸಲ್ಪಡುವವರಿಗೆ ಸಹಾಯ ಮಾಡುವುದಕ್ಕೆ ಶಕ್ತನಾಗಿದಾನೆ" (ಇಬ್ರಿಯ 2:18-19).
>
> "ಯಾಕೆಂದರೆ ನಮಗಿರುವ ಮಹಾ ಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು **ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು,** ಪಾಪ ಮಾತ್ರ ಮಾಡಲಿಲ್ಲ" (ಇಬ್ರಿಯ 4:15).
>
> "ಯೇಸುವು—ಮೊಣಕಾಲೂರಿ—ತಂದೆಯೇ, ನಿನಗೆ ಇಷ್ಟವಿದ್ದರೆ ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಹೇಗೂ ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ಆಗಲಿ ಎಂದು ಪ್ರಾರ್ಥನೆ ಮಾಡಿದನು. ...... ಆತನು

ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿ ಯಲ್ಲಿತ್ತು" (ಲೂಕ 22:42,44).

ಎಲ್ಲಕ್ಕಿಂತ ದೃಢವಾದದ್ದನ್ನು ಸತ್ಯವೇದವು ಹೇಳುತ್ತದೆ : "......ದೇವರು ಪಾಪ ಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು" (2 ಕೊರಿಂಥ 5:21).

ಆದ್ದರಿಂದ, ಯೇಸುವನ್ನು ವಿಚಾರಣೆಗೆ ಒಳಪಡಿಸಿದಾಗ ಇಲ್ಲವೇ ಇಬ್ಬರು ಕಳ್ಳರ ನಡುವೆ ಆತನನ್ನು ಶಿಲುಬೆಗೆ ಹಾಕಿದಾಗ ಮಾತ್ರ ಅವನು ಅವನ ಶತ್ರುಗಳಿಂದ ಒಬ್ಬ ಪಾಪಿಯೆಂದು ಕರೆಯಲ್ಪಡಲಿಲ್ಲ, ಆದರೆ ಬೇರೆ ಮನುಷ್ಯರು ಹೊಂದಿದ್ದ ಪ್ರಕೃತಿಯನ್ನೇ ಹೊಂದಿದವನಾಗಿದ್ದು, ಅದರಿಂದ ಒಬ್ಬ ಪಾಪಿಯಾಗಿ ಮಾಡಲ್ಪಟ್ಟನು. ಈ ಕಾರಣದಿಂದಾಗಿಯೇ ನಾವು ಹೊಂದಿರುವ ಪ್ರಕೃತಿಯನ್ನು "ಪಾಪದ ಶರೀರ"ವೆಂದು ಇಲ್ಲವೇ ಚುಟುಕಾಗಿ "ಪಾಪ"ವೆಂದೂ ಕರೆಯಲ್ಪಟ್ಟಿದೆ.

"......ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡಿತು" (ರೋಮಾ 7:20;8:4).

ನಮ್ಮ ಶೋಧನೆಗಳ ಮೂಲವು, ಸತ್ಯವೇದದಲ್ಲಿ ಚುಟುಕಾಗಿ ಹೇಳುವಂತೆ, "ಪಾಪ ಸ್ವರೂಪ" ಇಲ್ಲವೇ "ಪಾಪ" ಎಂದು ಕರೆಯಲ್ಪಟ್ಟಿದೆ. ಕ್ರಿಸ್ತನು ಪಾಪರಹಿತನಾಗಿದ್ದರೂ, ನಮ್ಮ ಮಾನವ ಪ್ರಕೃತಿಯನ್ನು ಪಾಲ್ಗೊಂಡದ್ದರಿಂದ ಪಾಪಭರಿತ ಮನುಷ್ಯರಿಂದ ಒಬ್ಬ ಪಾಪಿಯಾಗಿ ನಡೆಸಲ್ಪಟ್ಟು ನಮಗಾಗಿ "ಪಾಪ ಸ್ವರೂಪಿ"ಯಾಗಿ ಮಾಡಲ್ಪಟ್ಟನು. ಆತನು "ಪಾಪವನ್ನರಿಯಲಿಲ್ಲ" ಯಾಕೆಂದರೆ ಆತನು ಎಂದಿಗೂ ಪಾಪವನ್ನು ಮಾಡಲಿಲ್ಲ, ಆದರೆ ಆತನು ಎಂದಿಗೂ ಶೋಧಿತನಾಗಲಿಲ್ಲವೆಂದಲ್ಲ.

ಪಾಪವನ್ನು ಬಂಧಿಸಿ, ಅದನ್ನು ಸೆರೆಯಾಗಿ ಕೊಂಡೊಯ್ಯಲು, ಯೇಸುವು, ಅದರದೇ ನೆಲೆಯಾದ ಮಾನವ ಪ್ರಕೃತಿಯಲ್ಲೇ ಅದನ್ನು ಸಂಧಿಸಿದನು. ಹೀಗೆ ಆತನ ವಿಜಯವು ಸತ್ಯವಾದದ್ದೂ ಅದ್ವಿತೀಯವಾದದ್ದು (ಸಾಟಿಯಿಲ್ಲದ್ದು) ಆಗಿತ್ತು. ನಮ್ಮ ಹಾಗೆಯೇ ಎಲ್ಲಾ ರೀತಿಯಲ್ಲಿಯೂ ಶೋಧಿತನಾದರೂ, ಆತನೊಬ್ಬನೇ ಸಂಪೂರ್ಣವಾಗಿ ಪಾಪರಹಿತನಾಗಿದ್ದನು. ಕ್ರಿಸ್ತನು ನೀತಿಯನ್ನೂ ಪವಿತ್ರತೆಯನ್ನೂ ಮಾನವ ಪ್ರಕೃತಿಯಿಂದ ಹೊರತಾಗಿ ಪ್ರದರ್ಶಿಸಲಿಲ್ಲ, ಆತನು ತನ್ನ ಪಾಪರಹಿತ ಜೀವಿತವನ್ನು ಮಾನವ ಪ್ರಕೃತಿಯ ಮಣ್ಣಿನ ಪಾತ್ರೆಯಲ್ಲಿ ದೇವರ ಬಳಿಗೆ ತಂದನು. ಈ ಆಶ್ಚರ್ಯಕರ ಪರಿಸ್ಥಿತಿಯು ಅದ್ಭುತವಾದ ನಂಬಿಕೆ

ಹಾಗೂ ನೀತಿಯುದಾಗಿದ್ದು, ಪಾಪದ ನಿಜವಾದ ಗೆಲವು ಮತ್ತು ದೇವರಿಗೆ ಒಂದು ಪರಿಪೂರ್ಣ ಅರ್ಪಣೆಯಾಗಿತ್ತು.

"......ಏನೆಂದರೆ ಆತನು(ದೇವರು) ಪಾಪ ನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವ ದಲ್ಲಿಯೇ ಪಾಪಕ್ಕೆ ಮರಣ ದಂಡನೆಯನ್ನು ವಿಧಿಸಿದನು" (ರೋಮಾ 8:3).

ದೇವರು ಏಕಕಾಲದಲ್ಲಿ ಹಾಗೂ ಅದೇ ಪ್ರಕೃತಿಯಲ್ಲಿ ಪಾಪದ ಘೋರ ರೂಪವನ್ನು ನೀತಿಯ ಪರಿಪೂರ್ಣತೆಯನ್ನು ಯೇಸುವಿನ ಮೂಲಕ ಘೋಷಿಸಿ ದ್ದಾನೆ. ಈ ಮರ್ತ್ಯಗೃಹದಲ್ಲಿ ಪಾಪರಹಿತವಾಗಿದ್ದು, ಪಾಪವನ್ನು ದಂಡಿಸಿದನು.

ಇದಲ್ಲದೆ, ಆ ಮರ್ತ್ಯಗೃಹವನ್ನು ಪಾಪರಹಿತವಾಗಿ ಇಟ್ಟದ್ದರಿಂದ, ಅದನ್ನು ಮರ್ತ್ಯತೆಯಿಂದ ಅಮರತ್ವಕ್ಕೂ, ಸಾಯುವುದರಿಂದ ಸಾಯದೇ ಇರುವ ಹಾಗೂ ಮಾರ್ಪಾಟು ಮಾಡಲು ಒಂದು ಮಾರ್ಗವನ್ನು ಸಿದ್ಧಪಡಿಸಲಾಯಿತು. ಪಾಪ ಮತ್ತು ಮರಣವು ಒಂದೇ ಸಮಸ್ಯೆಯ ಭಾಗಗಳಾಗಿವೆ; ಒಂದು ಮತ್ತೊಂದರ ಪರಿಣಾಮವಾಗಿದೆ; ಆದಾಮನ ಪಾಪದಿಂದ ಮರಣವು ಹುಟ್ಟಿತು. ಕರ್ತನಾದ ಯೇಸುವು ಪಾಪದ ಶಕ್ತಿಯನ್ನು ಮುರಿದು ಅಂತ್ಯವಿಲ್ಲದ ಜೀವಕ್ಕೆ ಬಾಗಿಲನ್ನು ತೆರೆದನು. ತಾನು ಹೊಂದಿದ ಪ್ರಕೃತಿಯ ಮೇಲೆ ವಿಜಯ ಹೊಂದುವುದರ ಮೂಲಕ ಆತನು ಪಾಪವನ್ನು ಮುರಿದನು, ಆದ್ದರಿಂದ ಮರಣದ ಶೀತಲ ಕೊಠಡಿಯೊಳಕ್ಕೆ ಪ್ರವೇಶಿಸಿ ಅದರಿಂದ ಜಯಶಾಲಿಯಾಗಿ ಹೊರಕ್ಕೆ ಬರುವುದರ ಮೂಲಕ ಆತನು ಮರಣವನ್ನು ಮುರಿದನು.

ಯೇಸುವು ನಮ್ಮ ಮರ್ತ್ಯತ್ವದ ಬಲಹೀನತೆಯನ್ನು, ಅದರ ಶ್ರಮ ಮತ್ತು ಕಣ್ಣೀರು, ಅದರ ಬಾಧೆ ಮತ್ತು ಅದರ ಮರಣವನ್ನು ಸಂಪೂರ್ಣವಾಗಿ ಹೊಂದಿದ್ದನು. ಈ ಅನುಭವಗಳಲ್ಲಿ ಯಾವೊಂದು ಸಹ "ಹಾಗೆ ತೋರ್ಪಡಿಸಿ ಕೊಂಡನು" ಎಂದಿರಲಿಲ್ಲ; ನಿಜವಾಗಿಯೂ ಹಾಗೆಯೇ ಹೊಂದಿದ್ದನು. ಆತನು ಮಾನಸಿಕ ಯಾತನೆ ಹಾಗೂ ದೈಹಿಕ ನೋವನ್ನು ಎದುರಿಸಿ, ತಾಳಿಕೊಂಡನು. ತನ್ನ ತಂದೆಯು ಆರಿಸಿದ ಮಾರ್ಗವು ಮರಣದ ಅಂಧಕಾರದ ದ್ವಾರಗಳಿಗೆ ಕೊಂಡೊಯ್ಯುವುದನ್ನು ಆತನು ನೋಡಿದನು ಹಾಗೂ ನಿತ್ಯಜೀವಕ್ಕೆ ತನ್ನ ಪುನರುತ್ಥಾನದಲ್ಲಿ ಆತನು ನಂಬಿಕೆಯಿಟ್ಟಿದ್ದನು. ಈ ವಿಷಯಗಳ ಬಗ್ಗೆ ಕೆಳಗಿನ ವಚನಗಳು ಸಂಕ್ಷಿಪ್ತವಾಗಿ ತಿಳಿಸುತ್ತವೆ:

"ಯೇಸು ದಾರಿ ನಡೆದು **ದಣಿದು** ಆ ಬಾವಿಯ ಬಳಿಯಲ್ಲಿ ಹಾಗೆ ಕೂತು ಕೊಂಡನು" (ಯೋಹಾನ 4:6).

"ಯೇಸು **ಕಣ್ಣೀರು ಬಿಟ್ಟನು**" (ಯೋಹಾನ 11:35).

"ಈಗ **ನನ್ನ ಪ್ರಾಣವು ತತ್ತರಿಸುತ್ತದೆ**; ಮತ್ತು ನಾನೇನು ಹೇಳಲಿ? ತಂದೆಯೇ ಈ ಕಾಲದೊಳಗಿಂದ ನನ್ನನ್ನು ತಪ್ಪಿಸು. ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು ತಂದೆಯೇ, ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ ಅಂದನು" (ಯೋಹಾನ 12:27).

"ಆದರೆ ಯೇಸುವಿನ ಬಳಿಗೆ ಬಂದಾಗ ಆತನು ಆಗಲೇ ಸತ್ತಿರುವುದನ್ನು ಅವರು ಕಂಡು ಆತನ ಕಾಲುಗಳನ್ನು ಮುರಿಯಲಿಲ್ಲ. ಆದರೂ ಸಿಪಾಯಿಗಳಲ್ಲಿ ಒಬ್ಬನು ಈಟಿಯಿಂದ ಆತನ ಪಕ್ಕೆಯನ್ನು ತಿವಿದನು; ತಿವಿದ ಕೂಡಲೇ ರಕ್ತವೂ ನೀರೂ ಹೊರಟಿತು" (ಯೋಹಾನ 19:33-34).

"......ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು......ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ **ಅವಮಾನವನ್ನು** ಅಲಕ್ಷ್ಯ ಮಾಡಿ **ಶಿಲುಬೆಯ ಮರಣವನ್ನು ಸಹಿಸಿಕೊಂಡು**......ಆತನು **ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡ** ಆತನನ್ನು ಆಲೋಚಿಸಿರಿ" (ಇಬ್ರಿಯ 12:2-3).

"ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ **ಮರಣಕ್ಕೆ ತಪ್ಪಿಸಿ ಕಾಪಾಡಶಕ್ತನಾಗಿರುವಾತನಿಗೆ** (ರಕ್ಷಿಸಲು ಶಕ್ತನಾಗಿರುವಾತನಿಗೆ) ಬಲವಾಗಿ ಕೂಗುತ್ತಾ, ಕಣ್ಣೀರನ್ನು ಸುರಿಸುತ್ತಾ, ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿದನು" (ಇಬ್ರಿಯ 5:7).

ನಿಶ್ಚಯವಾಗಿಯೂ ಕರ್ತನ ಬಾಧೆಗಳ ಹಾಗೂ ಸಾಯುವ ಈ ಪ್ರತಿಯೊಂದು ಮೂಲಾಂಶಗಳ ವಾಸ್ತವಿಕತೆಯ ಬಗ್ಗೆ ಸಂಶಯಕ್ಕೆ ಎಡೆಯಿರುವುದಿಲ್ಲ. ಪಾಪ ಮತ್ತು ಮರಣವು ನಮಗೆ ಹೇಗೆ ವಾಸ್ತವವಾಗಿದೆಯೋ ಹಾಗೆಯೇ ನಿಜವಾದ ಹೋರಾಟದಲ್ಲಿ ಅವುಗಳು ಆತನಿಗೆ ಶತ್ರುಗಳಂತಿದ್ದವು.

ಈ ಕಾರಣದಿಂದಲೇ ಆತನ ವಿಜಯವು ನಿಜವಾದುದಾಗಿತ್ತು (ವಾಸ್ತವವಾದ್ದು). ಆತನು ನಿಜವಾಗಿಯೂ ಪಾಪ ಮತ್ತು ಮರಣವನ್ನು ಜಯಿಸಿದನು; ಮತ್ತು "ಸುವಾರ್ತೆಯ ಮೂಲಕ ಜೀವವನ್ನು ನಿರ್ಲಯತ್ವವನ್ನೂ" ತಂದನು (2 ತಿಮೋಥ 1:10).

ಯೇಸುವಿನ ಮರಣವು ಸಂಪೂರ್ಣವಾಗಿ ಯಾವುದೇ ಇತರ ಮರಣಕ್ಕಿಂತ ಭಿನ್ನವಾದುದಾಗಿತ್ತು; ಅದರ ವಾಸ್ತವಿಕತೆಯಲ್ಲಲ್ಲ, ಆದರೆ ಅದನ್ನು ಆವರಿಸಿದ

ಪರಿಸ್ಥಿತಿಯಲ್ಲಿ, ಆದಾಮ ಮತ್ತು ಹವ್ವಳ ಮರ್ತ್ಯತ್ವದ ವಂಶಪಾರಂಪರ್ಯ ದಿಂದಾಗಿ ಮಾನವನು ಸಾಯುತ್ತಾನೆ. ಸರಳವಾಗಿ ಹೇಳುವುದಾದರೆ, ಮಾನವನ ಪ್ರಕೃತಿಯು ತಾನಾಗಿಯೇ ಸಾಯುತ್ತದೆ. ಆದಾಗ್ಯೂ ಮಾನವರು ತಮ್ಮ ವೈಯಕ್ತಿಕ ಪಾಪಗಳನ್ನು ತಮ್ಮ ಮರ್ತ್ಯತೆಗೆ ಸೇರಿಸಿ, ಪಾಪದ ಸಂಬಳ ಮರಣ ಎಂಬುದನ್ನು ಎರಡು ಪಟ್ಟು ದೃಢಪಡಿಸುತ್ತಾರೆ. ಆದರೆ ಯೇಸುವಿಗೆ ಅದು ಭಿನ್ನವಾದುದು. ಆತನು ನಿಶ್ಚಯವಾಗಿಯೂ ಸತ್ತನು ಯಾಕೆಂದರೆ ಆತನು ಮರ್ತ್ಯನಾಗಿದ್ದನು ಮತ್ತು ಮರಣದ ಅಪ್ಪುಗೆಗೆ ತಾನಾಗಿಯೇ ಒಪ್ಪಿಸಿಕೊಟ್ಟನು. ಆದರೆ ಆತನು ವೈಯಕ್ತಿಕವಾಗಿ ಯಾವ ರೀತಿಯಲ್ಲಿಯೂ ಮರಣಕ್ಕೆ ಯೋಗ್ಯನಾಗಿರಲಿಲ್ಲ. ಆತನು ಒಬ್ಬ ನೀತಿವಂತನಾದ ಮನುಷ್ಯನಾಗಿದ್ದನು. ಬಹುಶಃ ಈ ಕಾರಣಕ್ಕಾಗಿಯೇ ಕ್ರಿಸ್ತನ ಮರಣವು ದೇವರ–ಯೋಜಿತ ಜೀವಿತದಲ್ಲಿ ಒಂದು ದುಃಖಕರವಾದ ದುರಾದೃಷ್ಟವೆಂದು ಅನೇಕರು ತಪ್ಪಾಗಿ ಭಾವಿಸುವವರಾಗಿದ್ದಾರೆ ಆ ರೀತಿಯಲ್ಲ.

## ಕಲ್ವರಿ

ಯೇಸುವಿನ ಮರಣವು ವಿಮೋಚನಾ ಸೇತುವೆಯ ಒಂದು ಅವಿಭಾಜ್ಯ ಭಾಗ ಹಾಗೂ ಕೇಂದ್ರ ತತ್ವವಾಗಿದೆ. ಅದು ಸಂಪೂರ್ಣವಾಗಿ ಶೋಧನೆಯನ್ನು ನಾಶಪಡಿಸಿದ ಹಾಗೂ ಪಾಪವನ್ನು ಅಂತಿಮವಾಗಿ ದಂಡಿಸಿದ ಒಂದು ಕ್ರಿಯೆಯಾಗಿತ್ತು: ಅದು ತನ್ನ ಅಂತಿಮ ಬಲಿ. ಮಾನವ ಪ್ರಕೃತಿಯ ಸ್ವಯಾಭಿಲಾಷೆಯ ಅಂತಿಮ ನಿರಾಕರಣೆಯ ಕಾರ್ಯವಾಗಿತ್ತು. ಈ ಕೆಳಗಿನ ವಾಕ್ಯಗಳನ್ನು ಎಚ್ಚರಿಕೆಯಿಂದ ನೋಡಿರಿ ಮತ್ತು ದೇವರ ಚಿತ್ತ ಹಾಗೂ ಕ್ರಿಸ್ತನ ಸ್ವಯಂಪ್ರೇರಿತ ವಿಧೇಯತೆಯು ಕಲ್ವರಿಯಲ್ಲಿ ಹೇಗೆ ಕೂಡಿತೆಂಬುದನ್ನು ಗಮನಿಸಿ :

> ಅಂದಿನಿಂದ ಯೇಸುಕ್ರಿಸ್ತನು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ಬಹು ಕಷ್ಟಗಳನ್ನನುಭವಿಸಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕೆಂದು ತನ್ನ ಶಿಷ್ಯರಿಗೆ ತಿಳಿಸುವುದಕ್ಕೆ ಪ್ರಾರಂಭ ಮಾಡಿದನು" (ಮತ್ತಾಯ 16:21).

> "ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ಆದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ. ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವುದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರಿಗಿ ಪಡೆದುಕೊಳ್ಳುವುದಕ್ಕೆ ನನಗೆ ಅಧಿಕಾರ ಉಂಟು ; ಈ ಅಪ್ಪಣೆಯನ್ನು ನನ್ನ ತಂದೆಯಿಂದ ಹೊಂದಿದ್ದೇನೆ ಅಂದನು. (ಯೋಹಾನ 10:17-18,

(ಮುಂದುವರೆಯುವುದು)

# ಜೀವಸ್ವರೂಪನಾದ ದೇವರ ಸಭೆ (2)

**ಅಪೋಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟದ್ದೀರಿ. ಯೇಸುಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು—ಎಫೆಸ 2:20.**

ನಾವು ಸಹಕರಿಸಿ ಒಟ್ಟಾಗಿ ಸೇರಿ ಕೆಲಸ ಮಾಡುವುದು ಅತ್ಯಾವಶ್ಯಕವಾಗಿದೆ. ಅನ್ಯೋನ್ಯತೆಯು ನಮ್ಮ ನಂಬಿಕೆಗಳನ್ನು ಹಾಗೂ ಅಭ್ಯಾಸಗಳನ್ನು ಬಲಪಡಿಸು ವಂತದ್ದಾಗಿರಬೇಕು. ನಾವು ಪ್ರತಿಯೊಬ್ಬರೂ ನೇರವಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ತಂದೆಯಲ್ಲಿ ಜೋಡಣೆಯಾಗಿದ್ದೇವೆ. ಸಭಾಜೀವನದ ಆಶ್ಚರ್ಯಕರ ಸಂಗತಿಯೆಂದರೆ ಬಲಹೀನ ಕೊಂಡಿಗಳನ್ನು ಬೆಂಬಲಿಸಲು ನಾವು ಸಮೀಪಕ್ಕೆ ಕೂಡಿಬರಬಹುದು. ಬಲಹೀನತೆಯನ್ನು ಒಂದು ಬೆದರಿಕೆಯೆಂದು ನಾವು ಸೃಷ್ಟಿಸದೆ, ನಮ್ಮ ಪ್ರೀತಿ ಹಾಗೂ ಅನುಕಂಪಕ್ಕೆ ಅದು ಒಂದು ಸವಾಲಾಗಿ ಅದನ್ನು ನೋಡಬೇಕು.

## ಅಪರಿಚಿತರ ಬಗ್ಗೆ :

ದೇವರ ರಾಜ್ಯದಲ್ಲಿ ಜೀವಿತದ ಅವಶ್ಯ ಗುಣವು ಈಗ ನಮ್ಮಲ್ಲಿ ವಾಸಿಸಬೇಕು. ದೇವರು ತನ್ನ ರಾಜ್ಯದಲ್ಲಿ ಆತನನ್ನು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸ ಬೇಕೆಂದು ಅಪೇಕ್ಷಿಸುತ್ತಾನೆ. ಆ ಮಹಾದಿನಕ್ಕೆ ನಾವು ಈಗ ಸಿದ್ಧರಾಗುತ್ತಿದ್ದೇವೆ. ಮಾನವರನ್ನು ಸಿದ್ಧರಾಗಲು ಉತ್ತೇಜಿಸುವುದು ನಮ್ಮ ಜವಾಬ್ದಾರಿಗಳಲ್ಲೊಂದಾ ಗಿದೆ. ಅಪರಿಚಿತರ ಬಗ್ಗೆ ನಮ್ಮ ಮನೋಭಾವವು ಬಹುಮುಖ್ಯವಾದುದು. ಅವರು ಇಸ್ರಾಯೇಲ್ಯರ ಹಕ್ಕಿನಲ್ಲಿ ಪಾಲಿಲ್ಲದ ಅನ್ಯ ಜನರಾಗಿದ್ದಾರೆ. ಆದರೆ ದೇವರ ಸಮೀಪ ಬರಲು ನಾವು ಅವರನ್ನು ಉತ್ತೇಜಿಸಬೇಕು. 2ನೇ ಪೂರ್ವ ಕಾಲವೃತ್ತಾಂತ 6:32-33ರಲ್ಲಿ ದೇವಾಲಯವನ್ನು ಪ್ರತಿಷ್ಠೆಪಡಿಸುವಾಗ ಸೊಲೋಮೋನನು ಮಾಡಿದ ಮಹಾಪ್ರಾರ್ಥನೆಯನ್ನು ಪರಿಗಣಿಸಿ. "ನಿನ್ನ ಪ್ರಜೆಗಳಾದ ಇಸ್ರಾಯೇಲ್ಯರಿಗೆ ಸೇರದಂಥ ಒಬ್ಬೊಬ್ಬ ಪರದೇಶಿಯೂ ನಿನ್ನ ನಾಮಮಹತ್ತು, ಭುಜಬಲ, ಶಿಕ್ಷಾಹಸ್ತ ಇವುಗಳ ವರ್ತಮಾನ ಕೇಳಿ ದೂರದೇಶ ದಿಂದ ಬಂದು ಈ ಆಲಯದ ಮುಂದೆ ನಿಂತು ಪ್ರಾರ್ಥಿಸುವವಾದರೆ ನಿನ್ನ ನಿವಾಸ ವಾಗಿರುವ ಪರಲೋಕದಿಂದ ಅವರ ಪ್ರಾರ್ಥನೆಯನ್ನು ಕೇಳಿ ಅವರು ಬೇಡಿಕೊಂಡ ದ್ದನ್ನು ಅನುಗ್ರಹಿಸು. ಆಗ ಲೋಕದ ಎಲ್ಲಾ ಜನರೂ ನಿನ್ನ ನಾಮಮಹತ್ತನ್ನು ತಿಳಿದು ನಿನ್ನ ಜನರಾದ ಇಸ್ರಾಯೇಲ್ಯರಂತೆ ನಿನ್ನಲ್ಲಿ ಭಯಭಕ್ತಿಯುಳ್ಳವರಾಗಿ

ನಾನು ಈ ಆಲಯವನ್ನು ನಿನ್ನ ಹೆಸರಿನದಾಗಿ ಕಟ್ಟಿಸಿದ್ದೇನೆಂದು ತಿಳಿದು ಕೊಳ್ಳುವರು."

ದೇವರ ಆತ್ಮೀಕ ದೇವಾಲಯದ ಭಾಗವಾಗಿ ನಾವು ಆತನ ಹೆಸರನ್ನು ಧರಿಸಿದ್ದೇವೆ. ಜೀವದ ವಾಕ್ಯವನ್ನು ಸಾರುವಲ್ಲಿ ನಂಬಿಗಸ್ತ ಸಾಕ್ಷಿಗಳಾಗಿರುವುದೇ ನಮ್ಮ ಜವಾಬ್ದಾರಿಯಾಗಿರುತ್ತದೆ. ಅಪರಿಚಿತರಿಗೆ (ಪರದೇಶಿಗಳಿಗೆ) ನಮ್ಮ ಆಸಕ್ತ ಸ್ನೇಹಿತರಿಗೆ ಹಾಗೂ ನಮ್ಮ ಮಕ್ಕಳಿಗೆ ದೇವರು ಮೆಚ್ಚುವ ಆರಾಧನೆ ಮಾಡುವುದನ್ನು ಕಲಿಸಬೇಕು. ದೇವರನ್ನು ಸೇವಿಸಲು ಭಕ್ತಿಯ ಹಾಗೂ ಉತ್ಕಟವಾದ ಆಕಾಂಕ್ಷೆಯುಳ್ಳವರು ಹೊರಗಡೆ ಇರುತ್ತಾರೆ. ಆದರೆ ಸತ್ಯದ ಮಾರ್ಗವನ್ನು ಅವರಿಗೆ ತಿಳಿಸುವ ಅಗತ್ಯವಿದೆ. ಕೊರ್ನೇಲ್ಯನು ಅಂತಹ ಒಬ್ಬ ವ್ಯಕ್ತಿಯಾಗಿದ್ದನು ; ಅವನು ಭಕ್ತನೂ ಅವನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನೂ ದಾನ ಧರ್ಮ ಮಾಡುವವನೂ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುವವನೂ ಆಗಿದ್ದನು. (ಅ.ಕೃ. 10:1-2).

"ದೇವರು ಪಕ್ಷಪಾತಿಯಲ್ಲ, ಯಾವ ಜನರಲ್ಲಿಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಗೆಯಾಗಿದ್ದಾರೆ." (ಅ.ಕೃ. 10:35). ಆತನ ರಾಜ್ಯಕ್ಕೆ ಹಾಗೂ ಮಹಿಮೆಗೆ ಕರೆಯಲ್ಪಟ್ಟವರಾಗಿ, ಜನಾಂಗಗಳಿಗೆ ಈಗ ಮತ್ತು ದೇವರ ರಾಜ್ಯದಲ್ಲಿ ಬೋಧಿಸಲು ನಾವು ನೇಮಕಗೊಂಡಿದ್ದೇವೆ. ದೇವರು ಮೆಚ್ಚುವ ರೀತಿಯಲ್ಲಿ ಈಗ ಆತನನ್ನು ಹೇಗೆ ಆರಾಧಿಸಬೇಕೆಂದು ಇತರರಿಗೆ ತೋರಿಸಿಕೊಟ್ಟು ಅವರನ್ನು ಉತ್ತೇಜಿಸುವುದೇ ನಮ್ಮ ಪ್ರಸ್ತುತ ಜವಾಬ್ದಾರಿಯಾಗಿರುತ್ತದೆ. ಹಾಗೂ ಆತನ ರಾಜ್ಯದಲ್ಲಿ ಜನಾಂಗಗಳಿಗೆ ನೀತಿಯನ್ನು ಸತ್ಯವನ್ನು ಬೋಧಿಸುವ ವಿಶೇಷ ಸೌಲಭ್ಯದಲ್ಲಿ ಕ್ರಿಸ್ತನೊಂದಿಗೆ ಪಾಲ್ಗೊಳ್ಳುವುದಾಗಿದೆ.

## ಸತ್ಯವನ್ನು ಬೆಂಬಲಿಸುವುದು :

ಪ್ರಸ್ತುತದಲ್ಲಿ ನಾವು ಸಾಕ್ಷಿ ಕೊಡುವ ಮಾರ್ಗಗಳಲ್ಲೊಂದು ಯಾವುದೆಂದರೆ ದೇವರ ವಾಕ್ಯವನ್ನು ಹೆಚ್ಚು ಸಾರ್ವತ್ರಿಕವಾಗಿ ಓದಲು ಸಭೆಯು ಉತ್ತೇಜಿಸಬೇಕು. ಪೌಲನ ಎಚ್ಚರಿಕೆಯ ಮೂಲ ಅರ್ಥ ಇದಾಗಿತ್ತು, "ವೇದ ಪಾರಾಯಣವನ್ನು ಮಾಡುವುದರಲ್ಲಿ ಆಸಕ್ತನಾಗಿರು" (1 ತಿಮೋಥೆ 4:13). ಇತರರಿಗೆ ಸತ್ಯವೇದದ ಸತ್ಯವನ್ನು ಬೋಧಿಸುವುದು ಆವಶ್ಯಕವಾಗಿದೆ, ಆದರೆ ಸತ್ಯವೇದವು ತಾನೇ ಹೇಳುವ ಸತ್ಯದ ಆಳವನ್ನು ನಾವು ಅರಿಯಲು ಹೆಚ್ಚು ಸಿದ್ಧರಾಗಿರಬೇಕಲ್ಲವೇ ? ನಾವು ಕುಟುಂಬದಲ್ಲಿ ಸತ್ಯವೇದವನ್ನು ಓದುವಾಗ, ಬಂಧುವರ್ಗದವರಲ್ಲದೆ ಸ್ನೇಹಿತರನ್ನು

ಆಹ್ವಾನಿಸಬೇಕು. ನಾವು ಜೀವಸ್ವರೂಪ ದೇವರ ಸಭೆಯಾಗಿರುವುದರಿಂದ, ಕೇವಲ ಸತ್ಯವೇದವನ್ನು ಮೆಚ್ಚುವ ಸಂಘವಾಗಿ ತೋರಿಸಿಕೊಳ್ಳಬಾರದು.

ಈ ಸಂಬಂಧವಾಗಿ ಪೌಲನು ಎಫೆಸದ ಸಭೆಯವರಿಗೆ ಬರೆದಾಗ ಹಾಗೆಯೇ ಆಲೋಚಿಸಿದ್ದನು, "ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ." (ಎಫೆಸ 2:19-22 ; 3;14, 15 ; 4:5) ದೇವರ ಮನೆಯೇ ತಂದೆಯ ಕುಟುಂಬವಾಗಿರುತ್ತದೆ ; ತಂದೆಯು ತನ್ನ ಮಕ್ಕಳೊಂದಿಗೆ ವಾಸಿಸುತ್ತಾನೆ. ನಿಜವಾದ ಸಭೆಯು ಕ್ರಿಸ್ತನ ಮೇಲೆ ಸ್ಥಾಪಿತವಾಗಿರುತ್ತದೆ ; ಆತನು ಅಸ್ತಿವಾರದ ಕಲ್ಲಾಗಿದ್ದಾನೆ ಹಾಗೂ ಆತನ ಸಭೆಯು ಸತ್ಯಕ್ಕೆ ಬೆಂಬಲಿಸಲು ಹೊಣೆಯಾಗಿರುತ್ತದೆ. ಇದೇ ಸತ್ಯದ ಆಧಾರವಾಗಿರುತ್ತದೆ. ಯಾವ ರೀತಿಗಳಲ್ಲಿ ನಾವು ಸತ್ಯವನ್ನು ಬೆಂಬಲಿಸುತ್ತಿದ್ದೇವೆ ?

ಅಪೋಸ್ತಲನಾದ ಪೌಲನು ಮಾಡಿರುವ ರಚನಾತ್ಮಕ ಪ್ರಸ್ತಾವನೆಗಳು ಕಟ್ಟೋಣದ ಉದ್ದೇಶವನ್ನು ಪರಿಗಣಿಸಲು ನಮ್ಮನ್ನು ಉತ್ತೇಜಿಸುತ್ತದೆ. ಒಂದು ಕಟ್ಟಡವು **(house)** ನಮಗೆ ಆಶ್ರಯವನ್ನೂ, ಭದ್ರತೆಯನ್ನು ಮತ್ತು ಸುರಕ್ಷತೆಯನ್ನು ಒದಗಿಸುತ್ತದೆ—ಅದೊಂದು ಆಶ್ರಯದುರ್ಗವಾಗಿರುತ್ತದೆ. ಹಾಗಿದ್ದರೂ ಸಹ, ಕಟ್ಟಡಕ್ಕೂ ಗೃಹಕ್ಕೂ **(home)** ನಾವು ವ್ಯತ್ಯಾಸವನ್ನು ಗುರುತಿಸುತ್ತೇವೆ. ಈ ಭ್ರಷ್ಟಪ್ರಪಂಚದಲ್ಲಿ, ನಮ್ಮ ಸಭೆಗಳು ಎಷ್ಟರಮಟ್ಟಿಗೆ ಆತ್ಮೀಕ ಗೃಹಗಳಾಗಿರುತ್ತವೆ **(spiritual homes) ?** ತೊಂದರೆಗೊಳಗಾಗಿರುವ ಈ ಯುಗದಲ್ಲಿ ಯೋಗ್ಯ ರೀತಿಯಲ್ಲಿ ದೇವರಿಗೆ ಮೆಚ್ಚುಗೆಯಾದ ಆರಾಧನೆಯನ್ನು ಸಲ್ಲಿಸುವ ಜವಾಬ್ದಾರಿ ಹಾಗೂ ವಿಶೇಷ ಸವಲತ್ತು ನಮಗಿರುತ್ತದೆ. ಪೌಲನು ತಿಮೋಥೆಗೆ ಉಪದೇಶಿಸಿದಂತೆ, "ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಮನವಿಗಳನ್ನೂ ಕೃತಜ್ಞತಾ ಸ್ತುತಿಗಳನ್ನು ಮಾಡಬೇಕೆಂದು ಬೋಧಿಸುತ್ತೇನೆ. ನಮಗೆ ಸುಖ ಸಮಾಧಾನಗಳು ಉಂಟಾಗಿ ನಾವು ಪೂರ್ಣ ಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವಂತೆ ಅರಸುಗಳಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ವಿಜ್ಞಾಪನೆಗಳನ್ನು ಮಾಡಬೇಕು. ಹಾಗೆ ಮಾಡುವದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಇದೆ." (1 ತಿಮೋಥೆ 2:1-3). ಈಗ ನಮ್ಮದಾಗಿರುವ ಆಶೀರ್ವಾದಗಳನ್ನು ನಾವು ಪ್ರಶಂಸಿಸಿ, ಜೀವಸ್ವರೂಪನಾದ ದೇವರ ಸಭೆಯ ಸದಸ್ಯರಿಗೆ ಒದಗಿಸಿರುವ ಸವಲತ್ತುಗಳನ್ನು ಹಾಗೂ ಹಂಗನ್ನೂ ಹರ್ಷದಿಂದ ಸ್ವೀಕರಿಸೋಣ. (ಮುಗಿಯಿತು)

—ಭಾ. ಚೆಂದುದಾಸ್

# ಸತ್ಯವೇದದ ಮೂಲ ತತ್ವಗಳು - 6

**4. ಮರಣದ ಸ್ಥಿತಿ** (ಮುಂದುವರೆದುದು)

"ಯೆಹೋವನೇ ಅಭಿಮುಖನಾಗಿ ನನ್ನನ್ನು ಬಿಡಿಸು; ನಿನ್ನ ಕೃಪೆಯ ನಿಮಿತ್ತವೇ ನನ್ನನ್ನು ರಕ್ಷಿಸು. ಮೃತರಿಗೆ ನಿನ್ನ ಜ್ಞಾಪಕವಿರುವುದಿಲ್ಲವಲ್ಲಾ; ಪಾತಾಳದಲ್ಲಿ(ಸಮಾಧಿಯಲ್ಲಿ) ನಿನ್ನನ್ನು ಸ್ತುತಿಸುವವರು ಯಾರು?" (ಕೀರ್ತನೆ 6:4,5). ಈ ಕೀರ್ತನೆಯು ದಾವೀದನ ಪ್ರಾಣವು ಅಪಾಯದಲ್ಲಿದ್ದಾಗ ಬರೆಯಲ್ಪಟ್ಟಿತು. ಮಾನವ ಜೀವವು ಅಮರತ್ವದಿಂದ ದೂರವಾದುದು. ಅವನ ಜೀವವು ಮರಣದ ನಾಶನದಲ್ಲಿತ್ತು! ಬಿಡುಗಡೆಯನ್ನು ಬೇಡಲು ದಾವೀದನ ಕಾರಣವು ಇದಾಗಿತ್ತು. ಸತ್ತಾಗ ತಾನು ಧೂಳಾಗುವೆನೆಂದೂ, ತನ್ನ ಜ್ಞಾಪಕ ಶಕ್ತಿಯು ಇಲ್ಲದಂತಾಗುವುದೆಂದೂ ದೇವರನ್ನು ನೆನಸಿಕೊಂಡು ಆತನನ್ನು ಕೊಂಡಾಡುವುದು ತನ್ನಿಂದಾಗದೆಂದು ಹೇಳುತ್ತಾನೆ. ಸಮಾಧಿಯಲ್ಲಿ ದೇವರನ್ನು ಆರಾಧಿಸುವುದು ದುಸ್ಸಾಧ್ಯವಾದುದಾಗಿದೆ. ಮರಣದಿಂದ ವಿಮೋಚನೆ ಹೊಂದಿದಾಗ ಮಾತ್ರವೇ ತಾನು ದೇವರನ್ನು ಸ್ತುತಿಸಲು ಸಾಧ್ಯವೆಂದು ಹೇಳುತ್ತಾನೆ (ಕೀರ್ತನೆ 88:10-14ನ್ನು ಓದಿ.)

"ಪ್ರಭುಗಳಲ್ಲಿ ಭರವಸವಿಡಬೇಡಿರಿ; ಮಾನವನನ್ನು ನೆಚ್ಚಬೇಡಿರಿ, ಅವನು ಸಹಾಯಮಾಡಲು ಶಕ್ತನಲ್ಲ; ಅವನ ಉಸಿರು ಹೋಗಲು ಮಣ್ಣಿಗೆ ಸೇರುತ್ತಾನೆ. ಅವನ ಸಂಕಲ್ಪಗಳೆಲ್ಲವೂ ಅದೇ ದಿನದಲ್ಲಿ ಹಾಳಾಗುವವು" (ಕೀರ್ತನೆ 146:3,4). ಅಧಿಕಾರದಲ್ಲಿರುವ ಯಾವ ಮಾನವನೇ ಆಗಲಿ, ಭರವಸೆಯಿಡಲು ಯೋಗ್ಯನಲ್ಲ. ಅದಕ್ಕಿಂತ ಯಾಕೋಬನ ದೇವರಲ್ಲಿ ನಾವು ಭರವಸೆಯಿಡಬೇಕು. ಯಾಕೆಂದರೆ ಆತನು ಸರ್ವಶಕ್ತನಾಗಿರುವುದರಿಂದಲೂ, ನೀತಿವಂತನಾಗಿರುವುದರಿಂದಲೂ, ತಾನೊಬ್ಬನೇ ಅಮರತ್ವವುಳ್ಳವನಾಗಿರುವುದರಿಂದಲೂ, ನಾವು ಆತನಲ್ಲಿ ಭರವಸವಿಡಲು ಅರ್ಹನಾಗಿದ್ದಾನೆ (ವ. 6 ರಿಂದ 10ನವರೆಗೆ ಓದಿ).

"ಪಾತಾಳದವರು (ಸಮಾಧಿಯಲ್ಲಿರುವವರು) ನಿನ್ನನ್ನು ಸ್ತುತಿಸರು; ಸತ್ತವರು ನಿನ್ನನ್ನು ಕೀರ್ತಿಸರು; ಅಧೋಲೋಕಕ್ಕೆ ಇಳಿದು ಹೋದವರು ನಿನ್ನ ಸತ್ಯಸಂಧತೆಯನ್ನು ಆಶ್ರಯಿಸಲಾರರು, ಜೀವಂತನು, ಜೀವಂತನೇ ನಿನ್ನನ್ನು ಸ್ತುತಿಸುವವನು, ಹೌದು, ಜೀವಂತನಾದ ನಾನೇ ಈ ಹೊತ್ತು ನಿನ್ನನ್ನು ಹೊಗಳುವೆನು......" (ಯೆಶಾಯ 38:18,19). ಸಮಾಧಿಯಲ್ಲಿರುವವರು ದೇವರನ್ನು ಸ್ತುತಿಸಲಾರರು. ಸತ್ತವರು ದೇವರನ್ನು ಸ್ತುತಿಸಲಾರರು ಎಂಬುದಕ್ಕೆ ವಿರುದ್ಧವಾಗಿ ಜೀವಿತರು ದೇವರನ್ನು ಸ್ತುತಿಸಲು ಸಾಧ್ಯ ಎಂಬುದನ್ನು ಈ ವಚನಗಳಲ್ಲಿ ತಿಳಿಸಿದೆ. ಜೀವಂತವಾಗಿರುವಾಗ ಮಾತ್ರವೇ ಸ್ತುತಿಸುವುದಕ್ಕೆ

ಹಾಗೂ ನಿರೀಕ್ಷೆಗೆ ಅವಕಾಶವಿರುತ್ತದೆ. ಈ ವಚನಗಳಲ್ಲಿ ಮಹತ್ವವಾದ ಎಚ್ಚರಿಕೆಯ ಮಾತುಗಳಿವೆ.

5. ಎಲ್ಲಾ ಮನುಷ್ಯರೂ ಆದಾಮನ ಪ್ರಕೃತಿಯನ್ನು ವಂಶಿಕವಾಗಿ ಹೊಂದಿದ್ದು, ಅವನ ಪಾಪದ ಮಾರ್ಗದಲ್ಲಿ ನಡೆಯುವುದರಿಂದ, ದೇವರು ಅವರನ್ನು ಮರಣಕ್ಕೆ ಗುರಿಮಾಡಿದನು.

"ಮತ್ತು ಪುರುಷನಿಗೆ— ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ ಫಲವನ್ನು ನೀನು ಹೆಂಡತಿಯ ಮಾತು ಕೇಳಿ ತಿಂದ ಕಾರಣ ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು. ನಿನ್ನ ಜೀವಮಾನವೆಲ್ಲಾ ದುಡಿದು ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು. ಆ ಭೂಮಿಯಲ್ಲಿ ಮುಳ್ಳು ಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು. ಹೊಲದ ಬೆಳೆಯನ್ನು ಅನುಭವಿಸುವಿ. ನೀನು ತಿರಿಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ ; ನೀನು ಮಣ್ಣೇ ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದಿ. ಎಂದು ಹೇಳಿದನು" (ಆದಿಕಾಂಡ 3:17-19).

ಮರಣವು ಆಕಸ್ಮಿಕವಾಗಲೀ ಇಲ್ಲವೇ ಕೇವಲ ವೃದ್ಧಾಪ್ಯದಿಂದಾಗಲೀ ಬರಲಿಲ್ಲ. ದೇವರು ಒಂದು ಆಜ್ಞೆಯನ್ನು ಕೊಟ್ಟನು; ಹಾಗೆಯೇ ಅದಕ್ಕೆ ಅವಿಧೇಯರಾದಲ್ಲಿ ದಂಡನೆಯನ್ನು ವಿಧಿಸಿದನು. "ಇದಲ್ಲದೆ ಯೆಹೋವ ದೇವರು ಆ ಮನುಷ್ಯನಿಗೆ — ನೀನು ತೋಟದಲ್ಲಿರುವ ಎಲ್ಲಾ ಮರದ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು ; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು. ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು" (ಆದಿಕಾಂಡ 2:16-17). ಆ ಆಜ್ಞೆಗೆ ಅವಿಧೇಯತೆ ಅಥವಾ ಪಾಪ ಮಾಡಿದಲ್ಲಿ ತತ್ಪರಿಣಾಮವಾಗಿ ಮರಣವು ಬರುತ್ತದೆ. ಇಲ್ಲಿ ದೇವರು ತನ್ನ ನೀತಿಗನುಸಾರವಾಗಿ ತನ್ನ ಆಜ್ಞೆಯನ್ನು ಎತ್ತಿಹಿಡಿಯುತ್ತಾನೆ. ಆದ್ದರಿಂದ ಮರಣವು ನೇರವಾಗಿ ಪಾಪಕ್ಕೆ ಸಂಬಂಧಿಸಿದುದಾಗಿದೆ.

"ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು" (ರೋಮಾಪುರ 5;12). ಆದಾಮನು ಪಾಪವನ್ನು ಪರಿಚಯಿಸಿದನು ಮತ್ತು ತತ್ಪರಿಣಾಮವಾಗಿ ದೇವರು ತನ್ನ ಆಜ್ಞೆಯನ್ನು ಜಾರಿಗೆ ತಂದನು. (ಆದಿಕಾಂಡ 2:17 ; 3:17-19). ಆದಾಮನು ಮಾನವ ಒಕ್ಕೂಟದ ತಲೆಯಾಗಿದ್ದಾನೆ—ಅವನಿಗೆ ಏನು ಸಂಭವಿಸಿತೋ ಅವನಲ್ಲಿರುವ ಎಲ್ಲರಿಗೂ ಅದು ಸೇರುವುದು (1 ಕೊರಿಂಥ 15:22). ತತ್ಪರಿಣಾಮವಾಗಿ ಮರಣವು ಎಲ್ಲರ ಮೇಲೆಯೂ ಬಂತು, ಯಾಕೆಂದರೆ ಮಾನವರು ಮರ್ತ್ಯತ್ವವನ್ನು ವಾಂಶಿಕವಾಗಿ

ಪಡೆದದ್ದು, ಪಾಪ ಮಾಡುವ ಪ್ರವೃತ್ತಿಯನ್ನು ಹೊಂದಿರುತ್ತಾರೆ. ಮಾನವನಾಗಿ ಹುಟ್ಟಿದಾಕ್ಷಣವೇ ತಪ್ಪಿತಸ್ಥನಾಗಲೀ ಪಾಪಿಗಳಾಗಲೀ ಆಗುವುದಿಲ್ಲ. ಯೇಸುವನ್ನು ಹೊರತುಪಡಿಸಿ, ಎಲ್ಲರೂ ಈ ಆಶಾಪಾಶಕ್ಕೆ ವಿಧೇಯರಾಗಿರುತ್ತಾರೆ. ಅದರಿಂದಾಗಿ ಪಾಪಿಗಳಾಗಿರುತ್ತಾರೆ, ಮತ್ತು ಮರಣಕ್ಕೆ ಯೋಗ್ಯರಾಗಿರುತ್ತಾರೆ. "ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ" (ರೋಮಾಪುರ 6:23). ಪಾಪ ಮತ್ತು ಮರಣವು ದೇವರ ಏರ್ಪಾಟಿನಂತೆ ಕಾರಣ ಹಾಗೂ ಪರಿಣಾಮವಾಗಿವೆ (ಆದಿಕಾಂಡ 2:17). "ನಿತ್ಯ ಜೀವವು" ಮಾನವ ಸ್ವಾಧೀನಕ್ಕೆ ದೂರವಾಗಿದ್ದು ದೇವರ ಉಚಿತಾರ್ಥ ವರವಾಗಿದೆ; ಯೇಸುಕ್ರಿಸ್ತನ ಮೂಲಕವೇ ಅದನ್ನು ಹೊಂದಬಹುದಾಗಿದೆ (ಆದಿಕಾಂಡ 3:17-19 ; ರೋಮಾಪುರ 5:12).

"ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವಾಗುವದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು." (1 ಕೊರಿಂಥ 15;21-22). ಕ್ರಿಸ್ತನು ಮತ್ತು ಆದಾಮನು ಎಲ್ಲಾ ಮಾನವರೂ ಸಂಯೋಚಿತವಾಗಿರುವ ಎರಡು ಸಂಯುಕ್ತ ಅಧಿಪತಿಗಳಾಗಿದ್ದಾರೆ. "ಆದಾಮನಲ್ಲಿ" ಇರುವುದೆಂದರೆ ಪಾಪದಲ್ಲಿರುವುದು, ಮರಣವು ಅದರ ಸಂಬಳವಾಗಿರುತ್ತದೆ. "ಕ್ರಿಸ್ತನಲ್ಲಿ" ಇರುವುದೆಂದರೆ ವಿಧೇಯತೆಯ ಜೀವಿತವನ್ನು ಜೀವಿಸಲು ದೇವರ ಉಚಿತಾರ್ಥ ವರವಾದ ನಿತ್ಯಜೀವದೊಂದಿಗೆ ನೀತಿವಂತರೆಂದು ನಿರ್ಣಯಿಸಲ್ಪಡುವುದು. "ಮರಣವೇ ನಿನ್ನ ಜಯವೆಲ್ಲಿ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ? ಮರಣದ ಕೊಂಡಿ ಪಾಪವೇ. ಮತ್ತು ಪಾಪದ ಬಲಕ್ಕೆ ಆಧಾರವು ಧರ್ಮಶಾಸ್ತ್ರವೇ." (ಕೊರಿಂಥ 15;55-56). ಸರ್ಪದ ವಿಷವು ಹೇಗೆ ಮರಣವನ್ನುಂಟುಮಾಡುತ್ತದೋ ಹಾಗೆಯೇ ಪಾಪವು. ಅಲ್ಲದೆ ಲೋಕಕ್ಕೆ ಪಾಪವನ್ನು ಪ್ರವೇಶ ಮಾಡುವಲ್ಲಿ ಒಂದು ಸರ್ಪವು ಸಹ ಸೇರಿತ್ತು, (ಆದಿಕಾಂಡ 3:1-5). ಹೀಗೆ ಸರ್ಪದ ವಿಷದ ಕೊಂಡಿಗೆ ಪಾಪವನ್ನು ಹೋಲಿಸುವುದು ತಕ್ಕದ್ದಾಗಿದೆ. ನಾವು ಆದಾಮನಲ್ಲಿದ್ದರೆ ಆಗ ಸಮಾಧಿಯು (ಪಾತಾಳ, ನರಕ) ವಿಜಯಿಯಾಗುತ್ತದೆ. ಕ್ರಿಸ್ತನಲ್ಲಿ ಇದು ತಿರುಗುಮುರುಗಾಗುತ್ತದೆ. (ಅ.ಕೃ. 2:31 ; ಪ್ರಕಟನೆ 20:13 ; 1:18). ದೇವರ ಆಜ್ಞೆಗನುಸಾರವಾಗಿ ಪಾಪವು ಮರಣವನ್ನು ತರುತ್ತದೆ (ರೋಮಾಪುರ 8;12 ನೋಡಿ). ದೈವೀಕ ಆಜ್ಞೆಗಳು ಪಾಪವನ್ನು ಪ್ರಕಟಮಾಡುತ್ತದೆ; ಮಾನವರಲ್ಲಿ ಅಸಮರ್ಥತೆಯ ಒಂದು ಅರಿವನ್ನುಂಟುಮಾಡಿ, ದೇವರ ಮೇಲೆ ಹಾಗೂ ಆತನ ರಕ್ಷಣೆಯ ಮೇಲೆ ಅವಲಂಬನೆಯನ್ನುಂಟುಮಾಡುತ್ತದೆ. (ರೋಮಾಪುರ 7:5, 7-9 ; ಗಲಾತ್ಯ 3:19-24;)

(ಮುಂದುವರೆಯುವುದು) –ಭಾ. ಚಂದುದಾಸ್